† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸಲಹಾ ಸಮಿತಿಯವರೂ ಸಹ ಇವರಿಗೆ ಸೈಟುಗಳನ್ನು ಕೊಡಬೇಕೆಂದು ರೆಕಮೆಂಡ್ ಮಾಡಿದ್ದಾರೆ. ವಿಭಾಗಧಿಕಾರಿಯವರು ಹಾಗೂ ಅಲ್ಲಿಯ ಪುರಸಭೆಯ ಆಡಳಿತಾಧಿಕಾರಿಯವರೂ ಸಹ ರೆಕಮೆಂಡ್ ಮಾಡಿ ಕಳುಹಿಸಿದ್ದಾರೆ. ಇಷ್ಟು ದಿವಸಗಳೊಳಗೆ ಸೈಟುಗಳನ್ನು ಕೊಡಬೇಕಾಗಿತ್ತು. ಆದರೆ ಆ ಜಮೀನು ಆಕ್ವೈರ್ ಆಗಬೇಕಾಗಿತ್ತು. ಈಗ ಆಕ್ವೈರ್ ಮಾಡಿಕೊಂಡಿದ್ದೇವೆ. ಹಣವನ್ನೂ ಕೂಡ ಕೊಟ್ಟಿದ್ದೇವೆ. ಅಲ್ಲಿ ಸುಮಾರು ೪೧೦ ಸೈಟುಗಳನ್ನು ಮಾಡಿದ್ದೇವೆ. ತಾವು ಹೇಳಿದ ೨೦ ಕುಟುಂಬದವರು ಏನಿದ್ದಾರೆ ಅವರು ಹಿಂದುಳಿದವರೆಂದು ತಿಳಿದಿದೆ. ಅವರಿಗೆ ಅಲ್ಲಿ ಸೈಟುಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ. ವಿ. ವೈಗಾಂಕರ್.—ಲ್ಯಾಂಡನ್ನು ಆಕ್ವೈರ್ ಮಾಡಿಕೊಂಡು ಒಂದು ವರ್ಷದ ಮೇಲ್ಪಟ್ಟು ಆಗಿದೆ. ಸಲಹಾ ಸಮಿತಿಯವರೂ ಶಿಫಾರಸ್ ಮಾಡಿ ಒಂದು ವರ್ಷದ ಮೇಲಾಗಿದೆ. ಅಲ್ಲಿರತಕ್ಕಂಥ ಆಡಳಿತಾಧಿಕಾರಿಯವರು ಸೈಟುಗಳನ್ನು ಅಲಾಟ್ ಮಾಡದೇ ಹಾಗೆ ಇಟ್ಟುಕೊಂಡಿದ್ದಾರೆ. ಅಲ್ಲಿರತಕ್ಕಂಥ ಈ ೨೦ ಜನ ಹಿಂದುಳಿದ ಕುಟುಂಬದವರು ಎರಡು ಮಳೆಗಾಲವನ್ನು ಬಹಳ ಕಷ್ಟದಿಂದ ಕಳೆದಿದ್ದಾರೆ. ಈಗ ಅವರು ಬೇರೆಯವರ ಜಮೀನಿನಲ್ಲಿ ವಾಸಿಸುತ್ತಿದ್ದಾರೆ. ಆದಕ್ಕಾಗಿ ಈಗಲೇ ಇಂತಿಷ್ಟು ಅವಧಿಯೊಳಗೆ ಕೊಡುತ್ತೇವೆಂಬ ಆಸ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಜಾಗ್ರತೆ ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಮುನಿಸಿಪಾಲಿಟಿಯವರು ೬೮,೬೯೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ೯೦,೦೦೦ ರೂಪಾಯಿಗಳನ್ನು ಅಕ್ವಿಜಿಷನ್ ಚಾರ್ಜಸ್ ಎಂಬುದಾಗಿ ಕೊಡಬೇಕಾಗಿದೆ. ಆದರೆ ಮುನಿಸಿಪಾಲಿಟಿಯವರ ಹತ್ತಿರ ಹಣ ಇಲ್ಲ. ಆದ್ದರಿಂದ ನಿಧಾನವಾಗಿದೆ. ಆದರೂ ಈ ೨೦ ಜನ ಕುಟುಂಬದವರಿಗೆ ಆದಷ್ಟು ಜಾಗ್ರತೆ ಸೈಟುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

MR. SPEAKER.—Question No. 962 is held over.

Production of Varalakshmi Cotton Seeds.

975. SRI G. F. UPANALE (Shirhatti).—Will the Minister for Agriculture and Parliamentary Affairs be pleased to state.—

(*a*) whether it has come to the notice of Government that the plots were alloted to the royots for producing the varalakshimi cotton seeds iu the State during 1975—76 ;

(*b*) the amount payable to the ryots after purachasing the seeds by the Government ;

(*c*) whether there is any balance amount due to the ryots by the Government ;

(*d*) if so, the steps taken by Government to pay the balance amount ?

SRI K. H. RANGANATH (Minister for Agriculture and Parliamentary Affairs).—

uestion does not arise in-view of the reply to

t arise.

t arise.

ಶ್ರೀ ಜಿ. ಎಫ್. ಉಪನಾಳ.—ನಾನು ಕೇಳಿದ್ದು ೧೯೭೪-೭೫ನೇ ಇಸವಿಯದ್ದು. ಆದರೆ ಪ್ರಶ್ನೆಯಲ್ಲಿ ೧೯೭೫-೭೬ ಎಂಬುದಾಗಿ ಆಚ್ಚಾಗಿದೆ. ಆದ್ದರಿಂದ ಅವನ್ನು ೭೪-೭೫ ಎಂಬುದಾಗಿ ತಿದ್ದಿಪಡಿ ಮಾಡಿಕೊಳ್ಳಬೇಕು.

† ಶ್ರೀ ಕೆ. ಎಚ್., ರಂಗನಾಥ್.—ಕೊಟ್ಟಿರುವುದು ೧೯೭೫-೭೬ರಾಗಿದ್ದರೂ ಕೂಡ ಅವರ ಮನಸ್ಸಿನಲ್ಲಿರುವುದು ೧೯೭೩-೭೫ ರದ್ದು. ೧೯೭೪-೭೫ನೇ ಸಾಲಿಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಜಿ. ಎಫ್. ಉಪನಾಳ.—೧೯೭೪-೭೫ನೇ ಸಾಲಿನಲ್ಲಿ ಸಮ್ಮ ರಾಜ್ಯದ ಪ್ರತಿಯೊಬ್ಬ ರೈತರಿಗೂ ವರಲಕ್ಷ್ಮಿ ಹತ್ತಿ ಬೀಜವನ್ನು ಹೊರಗಿನ ದೇಶದವರಿಂದ ತರಿಸಿಕೊಂಡು ಕೊಟ್ಟರು. ಆದರೆ ಆ ವರಲಕ್ಷ್ಮಿ ಹತ್ತಿ ಬೀಜವನ್ನು ಸರ್ಕಾರದವರು ಕೊಂಡುಕೊಳ್ಳುವಾಗ ಮೊದಲು ಕೆಲವು ರೈತರಿಗೆ ೧೦೦ ರೂಪಾಯಿ ನಂತೆ ಕೊಟ್ಟಿದ್ದಾರೆ. ಮತ್ತೆ ಕೆಲವು ರೈತರಿಗೆ ೭೫ ರೂಪಾಯಿಗಳಂತೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲ ರೈತರನ್ನೂ ಸಮಾನ ದೃಷ್ಟಿಯಿಂದ ನೋಡಬೇಕಾಗುತ್ತದೆ. ಏಕೆಂದರೆ ನಾವು ನೀವು ಕೂಡ ರೈತರ ಬೆಳವಣಿಗೆಯಾದರೆ ಈ ದೇಶದ ಬೆಳಗವಣಿಗೆಯಾಗುತ್ತದೆಂದು ಹೇಳುತ್ತಿರುವಾಗ ಎಲ್ಲ ರೈತರನ್ನೂ ಒಂದೇ ದೃಷ್ಟಿಯಲ್ಲಿ ನೋಡಬೇಕು. ಆದ್ದರಿಂದ ಇನ್ನು ಉಳಿದ ೨೫ ರೂಪಾಯಿಗಳನ್ನು ಕೊಡಬೇಕು.

ಶ್ರೀ ಕಳ್ಳಿಗುಡ್ಡ.—ಇನ್ನೂ ಕೆಲವರಿಗೆ ೨೫ ರೂಪಾಯಿಗಳನ್ನು ಕೊಡಬೇಕಾಗಿದೆ. ಅದನ್ನು ಸರ್ಕಾರದವರು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮೊದಲು ೧೦೦ ರೂಪಾಯಿಗಳಂತೆ ಕೊಡಿ ಎಂಬುದಾಗಿ ಹೇಳಿದ್ದರು ಅದರಂತೆ ಕೊಟ್ಟಿದ್ದೇವೆ. ತದನಂತರ ರೈತರೇ ೫೦ ರೂಪಾಯಿಗಳಿಗೆ ಒಪ್ಪಿಕೊಂಡಿದ್ದರು. ಆದರಂತೆ ೫೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆಮೇಲೆ ಮತ್ತೆ ಸ್ವಲ್ಪ ಒತ್ತಡ ಬಂದು ಪುನಃ ೨೫ ರೂಪಾಯಿಗಳಂತೆ ಕೊಟ್ಟಿದ್ದೇವೆ.

ಶ್ರೀ ಜಿ. ಎಫ್. ಉಪನಾಳ.—ರೈತರ ಪರವಾಗಿ ಸರ್ಕಾರದವರು ಇನ್ನೂ ೨೫ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿಕೊಳ್ಳಬೇಂಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ವಿನಂತಿ ಮಾಡಿಕೊಳ್ಳುವುದು ಬಹಳ ಸುಲಭ. ಮತ್ತೆ ನಾವು ಒಪ್ಪಿಕೊಳ್ಳುವುದೂ ಬಹಳ ಸುಲಭ, ಆದರೆ ಈಗಾಗಲೇ ಸರ್ಕಾರಕ್ಕೆ ಇದರಿಂದ ಸಾಕಷ್ಟು ನಷ್ಟವಾಗಿದೆ. ಮೊದಲು ೫೦ ರೂಪಾಯಿಗಳಂತೆ ಕೊಟ್ಟು ತದನಂತರ ಇನ್ನೂ ೨೫ ರೂಪಾಯಿಗಳಂತೆ ಕೊಡಬೇಕಾದರೆ ಒಟ್ಟು ೩೧ ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥ ಪರಿಸ್ಥಿತಿ ಒದಗಿ ಬಂತು. ಮತ್ತೆ ಮಾನ್ಯ ಸದಸ್ಯರು ಇನೂ ೨೫ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದರೆ ಮತ್ತೆ ೩೧ ಲಕ್ಷ ರೂಪಾಯಿಗಳನ್ನು ಕೊಡ ಬೇಕಾಗುತ್ತದೆ. ಈಗಾಗಲೇ ಸರ್ಕಾರಕ್ಕೆ ಇದರಿಂದ ೨ ಕೋಟಿ ಚಿಲ್ಲರೆ ರೂಪಾಯಿಗಳಷ್ಟು ನಷ್ಟವಾಗಿರುವುದು ಜೊತೆಗೆ ಮತ್ತಷ್ಟು ನಷ್ಟವನ್ನು ಸೇರಿಸತಕ್ಕಂಥ ಪರಿಸ್ಥಿತಿ ಒದಗಿ ಬರುವುದರಿಂದ ಸರ್ಕಾರ ತಕ್ಷಣವೇ ಕೊಡುತ್ತೇವೆಂದು ಭರವಸೆ ಕೊಟ್ಟುವುದಕ್ಕೆ ಸಾಧ್ಯವಿಲ್ಲ. ಮುಂದೆ ನೋಡೋಣ.

ಶ್ರೀ ಜಿ. ಬಿ. ಶಂಕರರಾವ್. ೫೦ ರೂಪಾಯಿಗಳಂತೆ ಒಪ್ಪಿಕೊಂಡಿದ್ದಂತಹ ರೈತರಿಗೆ ಪುನಃ ೨೫ ರೂಪಾಯಿಗಳಂತೆ ಕೊಟ್ಟಾಗ ಕೆಲವರಿಗೆ ಕೊಟ್ಟಿದ್ದಾರೆ. ಕೆಲವರಿಗೆ ಇನ್ನೂ ಬಾಕಿ ಉಳಿದಿದೆ. ಆದ್ದರಿಂದ ಬಾಕಿ ಉಳಿದಿರುವಂತಹ ೨೫ ರೂಪಾಯಿಗಳನ್ನು ಸರ್ಕಾರದವರು ರೈತರಿಗೆ ಕೊಡಬೇಕೆಂದು ಹೇಳುತ್ತೇನೆ.

SRI D. DEAVARAJ URS.—Sir, most of the hon. Members do not know the backgrouud. For instance, the Government need not have purchased all the cotton seeds from the farmers. At the first stage, it was agreed to purchase at the rate of Rs. 100 and they took. Subsequently many more farmers came forward and s[illegible] no market. So, in order to help them the Govern[illegible] purchase and they also said that whatever mone[illegible] decided to pay, could be paid to them at any tim[illegible] the understanding. When we paid the mo[illegible]

agreed and again they pleaded to pay more. For that also we have agreed and paid. Now, again and again if you rake up the issue and demand, I think Government will not be in a position to consider this.

SRI G. B. SHANKAR RAO.—Only the first instalment was given; but the second instalment was not given.

SRI D. DEVARAJ URS.—Just to help them we have committed and helped them. Again Government will not consider it.

Seniority List of Junior Engineers in PWD

1024. SRI D. NARAYANA DAS (Harapanahalli).—Will the Minister for Public Works be pleased to state.—

(*a*) whether the seniority list of Junir Engineer's (Diploma Holders) working in P.W.D. appointed susbequent to 1st November 1956 is prepared (Regularised condidates).

(*b*) if so, the number of Junior Engineer's belonging to Scheduled Caste and Scheduled Tribes in that list;

(*c*) whether the promotion quota as per recent Government Order is maintained while promoting them to the cadre of Assistant Executive Engineer Division-II;

(*d*) if the seniority list of the said officers is not yet prepared the suitable time required for its preparation and its publication?

SRI S. BANGARAPPA (Minister for Public Works).—

(*a*) & (*b*) The list is being prepared.

(*c*) Promotion quota will be maintained for the promotions effected subsequent to the issue of Order dated 27th April 1978.

(*c*) The list of Junior Engineers will be prepared and published by the end of January, 1979.

ಶ್ರೀ ಡಿ. ನಾರಾಯಣದಾಸ್.—ಸೀನಿಯಾರಿಟಿ ಪಟ್ಟಿಯಲ್ಲಿ ಹರಿಜನ-ಗಿರಿಜನರಿಗೆ ಸೇರಿರುವಂತಹ ಜೂನಿಯರ್ ಇಂಜಿನೀಯರ್‌ಗಳು ಎಷ್ಟು ಜನ ಇದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

† ಶ್ರೀ ಎಸ್. ಬಂಗಾರಪ್ಪ.—ಎಷ್ಟು ಜನ ಹರಿಜನ-ಗಿರಿಜನ ಜೂನಿಯರ್ ಇಂಜಿನೀಯರ್ಸ್ ಇದ್ದಾರೆಂಬ ಅಂಕಿ ಅಂಶಗಳು ಸಧ್ಯಕ್ಕೆ ನನ್ನಲ್ಲಿಲ್ಲ. ಮಾನ್ಯ ಸದಸ್ಯರಿಗೆ ಬೇಕಾಗಿದ್ದರೆ ಆದನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಡಿ. ನಾರಾಯಣದಾಸ್.—ಪಟ್ಟಿಯನ್ನು ಇದುವರೆಗೂ ತಯಾರಿಸದಿರಲು ಕಾರಣ ಏನು?

ಶ್ರೀ ಎಸ್. ಬಂಗಾರಪ್ಪ.—ಪಟ್ಟಿಯನ್ನು ಇನ್ನೂ ತಯಾರಿಸದಿರುವುದಕ್ಕೆ ಕಾರಣವೆನೆಂದರೆ, ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಫೈನಲೈಜ್ ಆಗಿರಲಿಲ್ಲ. ಈಗ ಫೈನಲೈಜ್ ಆಗಿದೆ ನಂತರ ಸರ್ವೀಸ್ ಪರ್ಟಿಕ್ಯುಲರ್ಸ್‌ನ್ನು ಸಂಬಂಧಪಟ್ಟಂತಹ ಚೀಫ್ ಇಂಜಿನೀಯರ್‌ರವರನ್ನು ಕೇಳಿದ್ದೇವೆ.